## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2080 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಉತ್ತರಿಸಬೇಕಾದ ಸಚಿವರ ಹೆಸರು: | ಸಾರಿಗೆ ಮತ್ತು ಮುಜರಾಯಿ ಸಚಿವರು |

********

| ಪ್ರಶ್ನೆ | ಉತ್ತರ |
|---|---|
| ಅ) ರಾಜ್ಯದಲ್ಲಿ ಮುಜರಾಯಿ ಇಲಾಖಾ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳು ಎಷ್ಟು, ಸದರಿ ದೇವಸ್ಥಾನಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; (ಜಿಲ್ಲಾವಾರು ದೇವಸ್ಥಾನದ ಟ್ರಸ್ಟಿ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳ ಹೆಸರು ದೂರವಾಣಿ ಸಂಖ್ಯೆ. ಕಛೇರಿ ದೂರವಾಣಿ ಸಂಖ್ಯೆ. ಸಹಿತ ಮಾಹಿತಿ ನೀಡುವುದು) | ರಾಜ್ಯದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು 34566 ದೇವಾಲಯಗಳಿವೆ.<br><br>2024-25 ರಿಂದ ಇಲ್ಲಿಯವರಗೆ ಮುಜರಾಯಿ ಹಾಗೂ ಮುಜರಾಯಿಯೇತರ ದೇವಸ್ಥಾನಗಳ ಜೀರ್ಣೋದ್ಧಾರ/ದುರಸ್ತಿ ಮಾಡಲು ಒಟ್ಟು **ರೂ. 68017.73 ಲಕ್ಷಗಳ** ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.<br><br>ಮುಜರಾಯಿ ದೇವಾಲಯಗಳ ಟ್ರಸ್ಟಿ/ಅನುವಂಶಿಕ ಆಡಳಿತ ಮುಕ್ತೇಸರರ ವಿವರಗಳನ್ನು **ಪೆನ್ ಡ್ರೈವ್** ರಲ್ಲಿ ಲಗತ್ತಿಸಿದೆ. |

| **ಯೋಜನೆ** | **2024-25** | **2025-26 ಇಲ್ಲಿಯವರಿಗೆ** | **ಒಟ್ಟು** |
|---|---|---|---|
| | **(ರೂ.ಲಕ್ಷಗಳಲ್ಲಿ)** | | |
| ದುರಸ್ತಿ/ಜೀರ್ಣೋದ್ಧಾರ/ನಿರ್ಮಾಣ | 22962.32 | 4447.54 | **27409.86** |
| ಆರಾಧನಾ ಯೋಜನ | 499.52 | 499.99 | **999.51** |
| ಪರಿಶಿಷ್ಟ ಜಾತಿ ಉಪಯೋಜನೆ | 499.52 | 499.99 | **999.51** |
| ಗಿರಿಜನ ಉಪ ಯೋಜನ | 119.97 | 119.99 | **239.96** |
| ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಪರಿಶಿಷ್ಟ ಜಾತಿ ಉಪಯೋಜನೆಗೆ | 137.99 | 148.00 | **285.99** |
| ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013ರಡಿ ಬಳಕೆಯಾಗದೇ ಇರುವ ಮೊತ್ತ ಇದರಡಿ ಗಿರಿಜನ ಉಪ ಯೋಜನೆಗೆ | 116.99 | 0.00 | **116.99** |
| ತಸ್ತೀಕ್ | 15491.46 | 18271.14 | **33762.6** |
| ವರ್ಷಾಸನ | 2107.65 | 2095.66 | **4203.31** |
| **ಒಟ್ಟು** | **41935.42** | **26082.31** | **68017.73** |

ಸಾಮಾನ್ಯ ಯೋಜನೆಯಡಿ ರಾಜ್ಯದ ದೇವಾಲಯಗಳು/ ಮಠಗಳು/ ಧಾರ್ಮಿಕ ಸಂಸ್ಥೆಗಳ ಅಭಿವೃದ್ಧಿ/ಜೀರ್ಣೋದ್ಧಾರಕ್ಕಾಗಿ **ರೂ. 27409.86 ಲಕ್ಷಗಳ** ಅನುದಾನವನ್ನು ಒದಗಿಸಿದ್ದು, ಸರ್ಕಾರದ ಆದೇಶದಲ್ಲಿಯೇ ದೇವಾಲಯಗಳನ್ನು ಆಯ್ಕೆ ಮಾಡಲಾಗಿರುತ್ತದೆ, ಜಿಲ್ಲಾವಾರು ವಿವರವನ್ನು **ಪೆನ್ ಡ್ರೈವ್** ರಲ್ಲಿ ಲಗತ್ತಿಸಿದೆ.

ಆರಾಧನಾ ಯೋಜನೆ/ ಪರಿಶಿಷ್ಟ ಜಾತಿ ಉಪಯೋಜನೆ/ ಗಿರಿಜನ ಉಪ ಯೋಜನೆಯಡಿ ವಿಧಾನಸಭಾ ಕ್ಷೇತ್ರಾವಾರು ಅನುದಾನಗಳನ್ನು ಮಂಜೂರು

| ಪ್ರಶ್ನೆ | | ಉತ್ತರ |
|---|---|---|
| | | ಮಾಡಲಾಗಿರುತ್ತದೆ. ಜಿಲ್ಲಾವಾರು ವಿವರಗಳನ್ನು **ಪೆನ್ ಡ್ರೈವ್**ರಲ್ಲಿ ಲಗತ್ತಿಸಿದೆ.<br><br>ತಸ್ತೀಕ್ ಮತ್ತು ವರ್ಷಾಸನ ಅನುದಾನವನ್ನು ಮಂಜೂರು ಮಾಡಿ ತಾಲ್ಲೂಕುಗಳಿಗೆ ಬಿಡುಗಡೆ ಮಾಡಲಾಗುತ್ತಿದ್ದು, ತಾಲ್ಲೂಕುವಾರು ಅನುದಾನದ ವಿವರವನ್ನು **ಪೆನ್ ಡ್ರೈವ್** ರಲ್ಲಿ ಲಗತ್ತಿಸಿದೆ. |
| ಆ) | ರಾಜ್ಯದಲ್ಲಿ ಮುಜರಾಯಿ ಇಲಾಖೆ ದೇವಸ್ಥಾನದ ಅರ್ಚಕರಿಗೆ ನೀಡುತ್ತಿರುವ ತಿಂಗಳ ವೇತನ ಎಷ್ಟು, ರಾಜ್ಯದಲ್ಲಿ ಅರ್ಚಕರಿಗೆ ತಿಂಗಳ ವೇತನ ಹೆಚ್ಚಿಸುವ ಬಗ್ಗೆ ಸರ್ಕಾರ ಚಿಂತಿಸಿದೆಯೇ: (ಸಂಪೂರ್ಣ ಮಾಹಿತಿ ನೀಡುವುದು) | ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸಮೂಹ "ಎ" ಮತ್ತು "ಬಿ" ಪ್ರವರ್ಗದ ದೇವಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಚಕರುಗಳಿಗೆ ತಟ್ಟೆ ಕಾಸು ಮತ್ತು ದೇವಾಲಯಗಲ್ಲಿ ನಡೆಯುವ ಸೇವೆಗಳಿಗೆ ಸಂಬಂಧಸಿದಂತೆ ರೊಕ್ಕವೆಚ್ಚ (ಸೇವಾ ಕಮಿಷನ್) ನೀಡಲಾಗುತ್ತಿದೆ. ಸದರಿ ತಟ್ಟೆಕಾಸು ಪಡೆಯುವ ಪದ್ಧತಿ ಇಲ್ಲದೇ ಇರುವ ದೇವಾಲಯಗಳಲ್ಲಿ ಅಥವಾ ತಟ್ಟೆಕಾಸನ್ನು ಅಥವಾ ಸೇವಾ ಕಮೀಷನ್ ಪಡೆಯಲು ನಿರಾಕರಿಸಿ ವೇತನ ಶ್ರೇಣಿಯನ್ನು ಪಡೆಯಲು ಇಚ್ಛಿಸಿದ್ದಲ್ಲಿ ಅಂತಹ ಅರ್ಚಕರುಗಳು ಆಯಾ ದೇವಾಲಯದ ಆದಾಯದ ಆರ್ಥಿಕ ಲಭ್ಯತೆಗನುಗುಣವಾಗಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮ 2022ರ ನಿಯಮ 8(2)(i)ರಂತೆ ರೂ. 11,600-24,600 (ಪ್ರವರ್ಗ-1 ರಲ್ಲಿ ಬರುವ ದೇವಾಲಯಗಳ ವೇತನ ಶ್ರೇಣಿ) ಹಾಗೂ ರೂ. 7,275-17,250 (ಪ್ರವರ್ಗ-2 ರಲ್ಲಿ ಬರುವ ದೇವಾಲಯಗಳ ವೇತನ ಶ್ರೇಣಿ) ಗಳಂತೆ ನಿಗಧಿಪಡಿಸಲಾದ ಮಾಸಿಕ ವೇತನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.<br><br>ಕಡಿಮೆ ಆದಾಯದ ಪ್ರವರ್ಗ "ಸಿ" ಶ್ರೇಣಿಯ ದೇವಾಲಯಗಳಲ್ಲಿ ಹೊಂದಿದ್ದ ಇನಾಂ/ಇನಾಂಯೇತರ ಜಮೀನುಗಳು ಸರ್ಕಾರದ ಇನಾಂ ರದ್ದಿಯಾತಿ ಕಾಯ್ದೆ/ ಭೂಸುದಾರಣೆ ಕಾಯ್ದೆಯಡಿ ಸರ್ಕಾರದಲ್ಲಿ ವಿಹಿತವಾಗಿರುವುದಕ್ಕೆ ಪರಿಹಾರಾರ್ಥವಾಗಿ ವಾರ್ಷಿಕ ಕನಿಷ್ಠ ರೂ. 72,000/-ಗಳ ತಸ್ತೀಕ್/ವರ್ಷಾಸನ ಮೊತ್ತವನ್ನು ನೀಡಲಾಗುತ್ತಿದೆ.<br><br>ಸರ್ಕಾರವು ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರುಗಳಿಗೆ ಮೇಲಿನಂತೆ ಮೊತ್ತಗಳನ್ನು ಕಾಲಕಾಲಕ್ಕೆ ಪರಿಷ್ಕರಿಸಿಕೊಂಡು ನೀಡಲಾಗುತ್ತಿದೆ. ತಸ್ತೀಕ್/ವರ್ಷಾಸನ ಮೊತ್ತಗಳನ್ನು ಹೆಚ್ಚಿಸುವ ಬಗ್ಗೆ ಆಯವ್ಯಯದ ಆರ್ಥಿಕ ಲಭ್ಯತೆ ಅನುಗುಣವಾಗಿ ಪರಿಶೀಲಿಸಲಾಗುತ್ತದೆ.<br><br>i. ಕರ್ನಾಟಕ (ಮತೀಯ ಮತ್ತು ಧರ್ಮಾದಾಯ) ಇನಾಂ ರದ್ದಿಯಾತಿ ಕಾಯ್ದೆ 1955 ಅಡಿಯಲ್ಲಿ ಇನಾಂ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ತಸ್ತೀಕ್ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಒಟ್ಟು 25,177 ಧಾರ್ಮಿಕ ಸಂಸ್ಥೆಗಳಿಗೆ ತಸ್ತೀಕ್ ಯೋಜನೆಯಡಿ ಅನುದಾನವನ್ನು ನೀಡಲಾಗುತ್ತಿರುತ್ತದೆ.<br>ii. ಹಾಗೆಯೇ ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961ರ ಅಡಿಯಲ್ಲಿ ಇನಾಂಯೇತರ ಜಮೀನುಗಳು ಸರ್ಕಾರದಲ್ಲಿ ವಿಹಿತವಾದ ಪ್ರಕರಣಗಳಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಪರಿಹಾರಾರ್ಥವಾಗಿ ವರ್ಷಾಸನ ಯೋಜನೆಯಡಿ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ. ಒಟ್ಟು 3459 ಧಾರ್ಮಿಕ ಸಂಸ್ಥೆಗಳಿಗೆ ವರ್ಷಾಸನ ಯೋಜನೆಯಡಿ ಅನುದಾನವನ್ನು ನೀಡಲಾಗುತ್ತಿರುತ್ತದೆ. |

| ಪ್ರಶ್ನೆ | ಉತ್ತರ |
|---|---|

iii. ಪ್ರಸ್ತುತ ಸರ್ಕಾರವು ವಾರ್ಷಿಕ ರೂ.72,000/- ಗಳ ತಸ್ತೀಕ್ ಮೊತ್ತವನ್ನು ಹಾಗೂ ರೂ.72,000/- ಗಳ ವರ್ಷಾಸನ ಮೊತ್ತವನ್ನು ನೀಡಲಾಗುತ್ತಿದೆ.

iv. 'ಸಿ' ವರ್ಗದ ದೇವಾಲಯಗಳ ಅರ್ಚಕರ ಬೇಡಿಕೆಯನ್ನು ಪರಿಗಣಿಸಿ ಸರ್ಕಾರವು ಕಳೆದ ಸಾಲಿನಲ್ಲಿ ಆದೇಶ ಸಂಖ್ಯೆ: ಕಂಇ.65.ಮುಅಬಿ.2025, ದಿನಾಂಕ:22-04-2025 ರ ಅನ್ವಯ ಈ ಹಿಂದೆ ನೀಡಲಾಗುತ್ತಿದ್ದ ವಾರ್ಷಿಕ ತಸ್ತೀಕ್ ಹಾಗೂ ವರ್ಷಾಸನ ಮೊತ್ತವನ್ನು ರೂ.60,000/- ಗಳಿಂದ ರೂ.72,000/- ಗಳಿಗೆ ಹೆಚ್ಚಿಸಿದ್ದು, ಸದರಿ ಹೆಚ್ಚಳದಂತೆ ತಸ್ತೀಕ್ ಮೊತ್ತವನ್ನು ಪಾವತಿಸಲಾಗುತ್ತಿದೆ.

v. ಕಳೆದ ಸಾಲಿನಲ್ಲಷ್ಟೇ ತಸ್ತೀಕ್ ಮೊತ್ತವನ್ನು ಹೆಚ್ಚಿಸಿರುವುದರಿಂದ ದೇವಾಲಯದ ಪೂಜಾ ಕೈಂಕರ್ಯಗಳ ನಿರ್ವಹಣೆಗಾಗಿ ಕಾಲ ಕಾಲಕ್ಕೆ ಬೇಡಿಕೆ ಮತ್ತು ಆರ್ಥಿಕ ಲಭ್ಯತೆಗೆ ಅನುಗುಣವಾಗಿ ತಸ್ತೀಕ್ ಮೊತ್ತವನ್ನು ಹೆಚ್ಚಿಸಲು ಪರಿಶೀಲಿಸಲಾಗುತ್ತದೆ.

vi. ಹಲವಾರು ದೇವಾಲಯಗಳಲ್ಲಿ ಭಕ್ತಾದಿಗಳು ಆರತಿ ತಟ್ಟೆಗೆ ದಕ್ಷಿಣೆ ರೂಪದಲ್ಲಿ ಸಮರ್ಪಿಸುವ ಕಾಣಿಕೆ ಮೊತ್ತವು ದೇವಾಲಯದ ನಿಧಿಗೆ ಜಮೆಯಾಗುವುದಿಲ್ಲ. ಬದಲಾಗಿ ಸದರಿ ಮೊತ್ತವು ಅರ್ಚಕರಿಗೆ ಸೇರುತ್ತಿದ್ದು, ತಟ್ಟೆ ಕಾಸು ಕೂಡ ಅರ್ಚಕರಿಗೆ ಆದಾಯದ ಮೂಲವಾಗಿರುತ್ತದೆ.

vii. ಅರ್ಚಕರಿಗೆ ದೇವಾಲಯದ ಆವರಣದೊಳಗೆ ಅಥವಾ ದೇವಸ್ಥಾನದ ಹತ್ತಿರದಲ್ಲಿ ಬಾಡಿಗೆ ರಹಿತ ವಸತಿಯನ್ನು ನೀಡಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಲ್ಲದೇ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ 'ಸಿ' ವರ್ಗದ ದೇವಾಲಯಗಳ ಅರ್ಚಕರಿಗೆ ಮತ್ತು ದೇವಾಲಯಗಳ ನೌಕರರಿಗೆ ಈ ಕೆಳಕಂಡಂತೆ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ.

i. ಅಧಿಸೂಚಿತ "ಸಿ" ದೇವಾಲಯದ ಸಿಬ್ಬಂದಿ/ ನೌಕರರು ಮರಣ ಹೊಂದಿದಲ್ಲಿ ಅವರ ಕುಟುಂಬದ ವಾರಸುದಾರರಿಗೆ ರೂ.2.00 ಲಕ್ಷಗಳ ಮರಣಾಂತ ಪರಿಹಾರ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ನೀಡಲಾಗುತ್ತಿದೆ.

ii. ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಅಧಿಸೂಚಿತ ದೇವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧಾರ್ಮಿಕ ದತ್ತಿ ಆಯುಕ್ತರ ಆದೇಶ ಸಂಖ್ಯೆ: ಎಡಿಎಂ01/832/2023- E-1218664, ದಿನಾಂಕ-27.10.2023ರನ್ವಯ ಈ ಕೆಳಕಂಡಂತೆ ವಾರ್ಷಿಕ ಪ್ರೋತ್ಸಾಹ ಧನವನ್ನು ಸಾಮಾನ್ಯ ಸಂಗ್ರಹಣಾ ನಿಧಿಯಿಂದ ಭರಿಸಿ ಷರತ್ತುಗಳಿಗೆ ಒಳಪಟ್ಟು ವಿತರಿಸಲು ಕ್ರಮವಹಿಸಲಾಗಿದೆ.

| ಕ್ರ.ಸಂ | ಶೈಕ್ಷಣಿಕ ಹಂತ | ಪ್ರೋತ್ಸಾಹ ಧನ (ರೂ.ಗಳಲ್ಲಿ) |
|---|---|---|
| 1. | ಪದವಿ ಪೂರ್ವ ಶಿಕ್ಷಣ (ಪಿ.ಯು.ಸಿ) | 5,000/- |
| 2. | ಐ.ಟಿ.ಐ/ಜೆ.ಒ.ಸಿ/ಡಿಪ್ಲೋಮ | 5,000/- |
| 3 | ಪದವಿ ಶಿಕ್ಷಣ | 7,000/- |
| 4. | ಸ್ನಾತಕೋತ್ತರ ಪದವಿ ಶಿಕ್ಷಣ | 15,000/- |
| 5. | ಇತರೆ ವೈದ್ಯಕೀಯ ಕೋರ್ಸ್‌ಗಳು (ಆಯುರ್ವೇದಿಕ್, ಹೋಮಿಯೋಪತಿ ಮತ್ತು ಯುನಾನಿ) | 25,000/- |
| 6. | ವೈದ್ಯಕೀಯ / ಡೆಂಟಲ್ ಶಿಕ್ಷಣ | 50,000/- |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><td>7.</td><td>ತಾಂತ್ರಿಕ ಶಿಕ್ಷಣ (ಇಂಜಿನಿಯರಿಂಗ್)</td><td>25,000/-</td></tr>
<tr><td>8.</td><td>ವಿದೇಶ ವ್ಯಾಸಂಗ</td><td>1,00,000/- (ಒಂದು ಬಾರಿ ಮಾತ್ರ)</td></tr>
</table>
ಈವರೆಗೆ 257 ವಿದ್ಯಾರ್ಥಿಗಳಿಗೆ ಒಟ್ಟು ರೂ.35,61,000.00 (ಮೂವತ್ತೈದು ಲಕ್ಷದ, ಅರವತ್ತೊಂದು ಸಾವಿರ ರೂಪಾಯಿಗಳು ಮಾತ್ರ) ಪ್ರೋತ್ಸಾಹ ಧನವನ್ನು ಪಾವತಿಸಲಾಗಿರುತ್ತದೆ.<br>
iii. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ನಿಯಮಗಳು, 2002ರ ನಿಯಮ 16ರ ಅಡಿಯಲ್ಲಿ ಅಧಿಸೂಚಿತ ಸಂಸ್ಥೆಗಳ ಅರ್ಚಕರು ಮತ್ತು ದೇವಸ್ಥಾನದ ನೌಕರರಿಗೆ ಸೇವಾಂತ ಪ್ರಯೋಜನವನ್ನು ಕಲ್ಪಿಸಲಾಗಿರುತ್ತದೆ.<br><br>
ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವರ್ಗ "ಸಿ" ಅಧಿಸೂಚಿತ ದೇವಾಲಯ/ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅರ್ಚಕರು ಮತ್ತು ನೌಕರರು ಹಾಗೂ ಅವರ ಕುಟುಂಬದ ಒಬ್ಬ ಸದಸ್ಯರು "ಕರ್ನಾಟಕ ಭಾರತ್ ಗೌರವ್ ಕಾಶಿ-ಗಯಾ ದರ್ಶನ ಯಾತ್ರೆ" ಯೋಜನೆಯಡಿ ಉಚಿತವಾಗಿ ಕಾಶಿ ಯಾತ್ರೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ.
</td></tr>
<tr><td>ಇ</td><td>ಹಾಸನ ಜಿಲ್ಲೆಯಲ್ಲಿ ಮುಜರಾಯಿ ದೇವಸ್ಥಾನಗಳು ಎಷ್ಟು; ಈ ದೇವಸ್ಥಾನಗಳಿಂದ ಸರ್ಕಾರಕ್ಕೆ ಬಂದ ಆದಾಯ ಎಷ್ಟು; ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಯಾವ ಯಾವ ದೇವಸ್ಥಾನಗಳ ಕಾಮಗಾರಿ ನಡೆಯುತ್ತಿದೆ: (ಹೋಬಳಿವಾರು ಮಾಹಿತಿ ನೀಡುವುದು)</td><td>
ಹಾಸನ ಜಿಲ್ಲೆಯ ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಡುವ ಒಟ್ಟು 2456 ದೇವಾಲಯಗಳಿರುತ್ತದೆ.<br><br>
ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ದೇವಾಲಯಗಳ ಆದಾಯವು ಸರ್ಕಾರದ ಬೊಕ್ಕಸಕ್ಕೆ ಜಮೆಯಾಗುವುದಿಲ್ಲ. ಇಲಾಖಾ ದೇವಾಲಯಗಳಲ್ಲಿ ಸಂಗ್ರಹವಾಗುವ ಆದಾಯವನ್ನು ಆಯಾಯ ದೇವಾಲಯಗಳ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗೆ ಜಮ ಮಾಡಲಾಗುತ್ತದೆ.<br><br>
2024-25ನೇ ಸಾಲಿನಿಂದ ಇಲ್ಲಿಯವರೆಗೆ ಹಾಸನ ಜಿಲ್ಲೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಮುಜರಾಯಿ ಮತ್ತು ಮುಜರಾಯೇತರ ದೇವಾಲಯಗಳಿಗೆ ಬಿಡುಗಡೆ ಮಾಡಲಾದ ಅನುದಾನಕ್ಕೆ ಸಂಬಂಧಿಸಿದ ಕಾಮಗಾರಿಗಳ ವಿವರವನ್ನು ಪೆನ್ ಡ್ರೈವ್ ರಲ್ಲಿ ಲಗತ್ತಿಸಿದೆ.<br><br>
ದೇವಾಲಯಕ್ಕೆ ಬರುವ ಯಾವುದೇ ಆದಾಯವನ್ನು ಸರ್ಕಾರದ ಬೊಕ್ಕಸಕ್ಕೆ ಸಂದಾಯ ಮಾಡುವುದಿಲ್ಲ.<br><br>
ಪ್ರವರ್ಗ "ಸಿ" ಶ್ರೇಣಿಯ ದೇವಾಲಯಗಳು / ಧಾರ್ಮಿಕ ಸಂಸ್ಥೆಗಳು ಅಸ್ತಿತ್ವದಲ್ಲಿ ಇರುವವರೆಗೆ ಪ್ರತಿ ನಿತ್ಯದ ಪೂಜಾ ಕೈಂಕರ್ಯಕ್ಕಾಗಿ ಸರ್ಕಾರದ ಆದೇಶ ಸಂಖ್ಯೆ:ಕಂಇ 65 ಮುಅಬಿ 2025 ದಿ:22.04.2025 ರ ಆದೇಶದಂತೆ ವಾರ್ಷಿಕ ರೂ.72,000/- ಗಳ ಕನಿಷ್ಟ ತಸ್ತೀಕ್ ಮೊತ್ತವನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ:ಕಂಇ 36 ಮುಅಬಿ 2025 ದಿ:20.08.2025 ರನ್ವಯ ವಾರ್ಷಿಕ ರೂ.72,000/- ಗಳ ಕನಿಷ್ಟ ವರ್ಷಾಸನವನ್ನು ನೀಡಲಾಗುತ್ತಿದೆ. ಇದೇ ಈ ದೇವಸ್ಥಾನಗಳ ಆದಾಯವಾಗಿರುತ್ತದೆ.<br><br>
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ 1997 ರ ಕಲಂ 17 ರನ್ವಯ ವಾರ್ಷಿಕ ಆದಾಯವು ರೂ.10.00 ಲಕ್ಷಗಳನ್ನು ಮೀರುವ ಸಂಸ್ಥೆಗಳಿಂದ ನಿವ್ವಳ ಆದಾಯದ ಶೇ.10 ರಷ್ಟು ಮೊತ್ತವನ್ನು ಹಾಗೂ ವಾರ್ಷಿಕ ಆದಾಯವು ರೂ.5.00 ಲಕ್ಷಗಳನ್ನು ಮೀರಿದ್ದು, ಆದರೆ ರೂ.10.00 ಲಕ್ಷಗಳನ್ನು ಮೀರಿರದ ಸಂಸ್ಥೆಗಳ ನಿವ್ವಳ
</td></tr>
</table>

| ಪ್ರಶ್ನೆ | ಉತ್ತರ |
|---|---|

ಆದಾಯದ ಶೇ.5 ರಷ್ಟು ವಂತಿಗೆ ಮೊತ್ತವನ್ನು ಸಾಮಾನ್ಯ ಸಂಗ್ರಹಣ ನಿಧಿಗೆ ಜಮೆ ಮಾಡಬೇಕಾಗಿರುತ್ತದೆ.

ಸಾಮಾನ್ಯ ಸಂಗ್ರಹಣಾ ನಿಧಿಯಡಿ, ದೇವಾಲಯಗಳ ಅಭಿವೃದ್ಧಿ/ಜೀರ್ಣೋದ್ಧಾರಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ವರ್ಷವಾರು ಬಿಡುಗಡೆ ಮಾಡಲಾದ ಅನುದಾನದ ವಿವರ ಕೆಳಕಂಡಂತಿದೆ.

| ಕ್ರ.ಸಂ | ವರ್ಷ | ಬಿಡುಗಡೆ ಮಾಡಲಾದ ಮೊತ್ತ |
|---|---|---|
| | | ರೂ. ಲಕ್ಷಗಳಲ್ಲಿ |
| 1 | 2023-24 | 17.50 |
| 2 | 2024-25 | 75.00 |
| 3 | 2025-26 | 0.00 |
| **ಒಟ್ಟು** | | **92.50** |

ಮುಜರಾಯಿ ಇಲಾಖೆಯ ದೇವಾಲಯಗಳಲ್ಲಿ ಹುಂಡಿಯಿಂದ ಮತ್ತು ಇತರೆ ಮೂಲಗಳಿಂದ ಸಂಗ್ರಹವಾಗುವ ಹಣವನ್ನು ಆಯಾಯ ದೇವಾಲಯಗಳ ಉಳಿತಾಯ ಖಾತೆಗೆ ಜಮಾ ಮಾಡಲಾಗುತ್ತದೆ.

ಹಾಗೆಯೇ ಬೆಂಗಳೂರು ನಗರದ, ಕೆ.ಆರ್ ವೃತ್ತದಲ್ಲಿರುವ ಶ್ರೀ ರಾಮಾಂಜನೇಯಸ್ವಾಮಿ ದೇವಸ್ಥಾನಕ್ಕೆ ಸೇರಿದ ಜಾಗದಲ್ಲಿ ಸಾಮಾನ್ಯ ಸಂಗ್ರಹಣ ನಿಧಿಯಿಂದ **ರೂ.27.70 ಕೋಟಿಗಳ** (ಇಪ್ಪತ್ತೇಳು ಕೋಟಿ ಎಪ್ಪತ್ತೇಳು ಲಕ್ಷಗಳು ಮಾತ್ರ) ಅಂದಾಜು ವೆಚ್ಚದಲ್ಲಿ "ಧಾರ್ಮಿಕ ಸೌಧ"ವನ್ನು ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಆಂದ್ರ ಪ್ರದೇಶದ, ತಿರುಪತಿ ಗಾಂಧೀ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಛತ್ರಕ್ಕೆ ಸೇರಿದ ಖಾಲಿ ನಿವೇಶನದಲ್ಲಿ **ರೂ.17.10 ಕೋಟಿಗಳ** ವೆಚ್ಚದಲ್ಲಿ ವಾಣಿಜ್ಯ ಸಂಕೀರ್ಣವನ್ನು ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ತಿರುಪತಿಯ ತಿರುಚಾನೂರಿನಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಕಲ್ಯಾಣ ಮಂಟಪದ ದುರಸ್ಥಿ ಮತ್ತು ಅಭಿವೃದ್ಧಿ ಕಾಮಗಾರಿಯನ್ನು ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ **ರೂ.3.90 ಕೋಟಿಗಳ** ವೆಚ್ಚದಲ್ಲಿ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ಕರ್ನಾಟಕ ರಾಜ್ಯ ಛತ್ರದ ಅಭಿವೃದ್ಧಿಯ ಮೊದಲನೇ ಹಂತದ ಕಾಮಗಾರಿಯನ್ನು **ರೂ.9.98 ಕೋಟಿಗಳ** (ಒಂಭತ್ತು ಕೋಟಿ ತೊಂಭತ್ತೆಂಟು ಲಕ್ಷಗಳು ಮಾತ್ರ) ವೆಚ್ಚದಲ್ಲಿ ಹೊರ ರಾಜ್ಯ ಛತ್ರಗಳ ಸಂಯೋಜಿತ ನಿಧಿಯಿಂದ ಭರಿಸಿ ನಿರ್ವಹಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ದೇವಾಲಯಗಳಲ್ಲಿ ಸಂಗ್ರಹವಾಗುವ ಮೊತ್ತಗಳು ಸರ್ಕಾರಕ್ಕೆ ಸಂದಾಯವಾಗುವುದಿಲ್ಲ. ಸದರಿ ಮೊತ್ತಗಳು, ಆಯಾಯ ದೇವಾಲಯದ ನಿಧಿಗೆ ಜಮೆ ಮಾಡಿಕೊಂಡು ಭರಿಸಲಾಗುತ್ತಿದ್ದು, ಈ ಕೆಳಕಂಡ ಮೂಲಭೂತ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗಿರುತ್ತದೆ.

1. ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಲ್ಲಿ ತಾಯಂದಿರು ಹಾಲುಣಿಸಲು ಪ್ರತ್ಯೇಕ ಕೊಠಡಿ ವ್ಯವಸ್ಥೆ ಹಾಗೂ ಒಂದು ವರ್ಷದೊಳಗಿನ ಚಿಕ್ಕ ಮಕ್ಕಳಿರುವ ತಾಯಂದಿರಿಗೆ ನೇರ ದರ್ಶನದ ವ್ಯವಸ್ಥೆ ಕಲ್ಪಿಸಲಾಗಿದೆ..

| | ಪ್ರಶ್ನೆ | ಉತ್ತರ |
|---|---|---|
| | | 2. ವಿಶೇಷ ಚೇತನರು ಹಾಗೂ ಹಿರಿಯ ನಾಗರೀಕರಿಗೆ ಪ್ರತ್ಯೇಕ ಸರದಿ ಸಾಲಿನಲ್ಲಿ ನೇರ ದರ್ಶನ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ.<br>3. ದೇವಾಲಯದಲ್ಲಿ ಮಾರ್ಗದರ್ಶನ ನೀಡುವ ಫಲಕಗಳನ್ನು ಅಳವಡಿಸಲಾಗಿರುತ್ತದೆ.<br>4. ದೇವಾಲಯಕ್ಕೆ ಭೇಟಿ ನೀಡುವ ಹಿರಿಯ ನಾಗರೀಕರು ಮತ್ತು ಕುಟುಂಬಗಳು ವಿಶ್ರಮಿಸಲು ಆಸನದ ವ್ಯವಸ್ಥೆ ಕಲ್ಪಿಸಲಾಗಿದೆ..<br>5. ದೇವಾಲಯಕ್ಕೆ ಬರುವ ಭಕ್ತಾಧಿಗಳಿಗೆ ನೆರಳಿನ ವ್ಯವಸ್ಥೆ ಕಲ್ಪಿಸಲಾಗಿದೆ..<br>6. ದೇವಾಲಯಗಳಲ್ಲಿ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ (RO Plant) ಕಲ್ಪಿಸಲಾಗಿದೆ.<br>7. ಶೌಚಾಲಯಗಳ ವ್ಯವಸ್ಥೆ ಕಲ್ಪಿಸಲಾಗಿದೆ.<br>8. ದೇವಾಲಯಗಳಲ್ಲಿ CC TV ಗಳ ಅಳವಡಿಸಲಾಗಿದೆ.<br>9. ದಿವ್ಯಾಂಗರಿಗೆ ಮತ್ತು ಅಶಕ್ತರಿಗೆ ಗಾಲಿ ಖುರ್ಚಿ (wheel chair) ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.<br>10. ಭಕ್ತಾದಿಗಳಿಗೆ ಎಲ್ಲಾ ಪ್ರಮುಖ ದೇವಾಲಯಗಳಲ್ಲಿ ದಾಸೋಹ ವ್ಯವಸ್ಥೆ ಕಲ್ಪಿಸಲಾಗಿದೆ.<br><br>ಇದಲ್ಲದೇ, ದೇವಾಲಯಗಳ ಸ್ವಚ್ಚತೆ ಮತ್ತು ಕ್ಷೇತ್ರದ ಪಾವಿತ್ರತೆಯನ್ನು ಕಾಪಾಡುವ ನಿಟ್ಟಿನಲ್ಲಿ 2025ರ ಆಗಸ್ಟ 15ನೇ ತಾರೀಖಿನಿಂದ ಅನ್ವಯ ವಾಗುವಂತೆ ಸಂಪೂರ್ಣವಾಗಿ ಪ್ಲಾಸ್ಟಿಕ್ ನಿಷೇಧವನ್ನು ಜಾರಿಗೆ ತರಲು ಇಲಾಖೆಯ ಎಲ್ಲಾ ಅಧಿಸೂಚಿತ ದೇವಾಲಯಗಳಿಗೆ ಸೂಚನೆ ನೀಡಲಾಗಿದೆ. |
| ಈ) | ಸದರಿ ಕಾಮಗಾರಿ ನಡೆಯುತ್ತಿರುವ ದೇವಸ್ಥಾನಗಳ ಕಾಮಗಾರಿಯು ಯಾವ ಹಂತದಲ್ಲಿದೆ: ಸ್ಥಳೀಯರಿಂದ ಸಂಗ್ರಹವಾದ ಮೊತ್ತ ಎಷ್ಟು; ಯಾವ ಕಾಲಮಿತಿಯೊಳಗೆ ಕಾಮಗಾರಿ ಸಂಪೂರ್ಣ ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು | ಹಾಸನ ಜಿಲ್ಲೆಗೆ ಕಳೆದ ಎರಡು ವರ್ಷಗಳಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದಂತೆ ಕೈಗೊಂಡ ದೇವಾಲಯಗಳ ಅಭಿವೃದ್ಧಿ ಕಾಮಗಾರಿಗಳ ವಿವರ **ಪೆನ್ ಡ್ರೈವ್** ರಲ್ಲಿ ಲಗತ್ತಿಸಿದೆ.<br><br>ಸರ್ಕಾರದಿಂದ ಮಂಜೂರಾದ ಅನುದಾನಕ್ಕೆ ಸೀಮಿತಗೊಳಿಸಿ ತಯಾರಿಸಿದ ಅಂದಾಜುಪಟ್ಟಿಗಳಿಗೆ ಸಕ್ಷಮ ಪ್ರಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಸ್ಥಳೀಯರಿಂದ ಈ ಕಾಮಗಾರಿಗಳಿಗೆ ಅನುದಾನವನ್ನು ಸಂಗ್ರಹ ಮಾಡುತ್ತಿರುವುದಿಲ್ಲ. ಗ್ರಾಮಸ್ಥರು, ಭಕ್ತಾದಿಗಳು ದಾನವಾಗಿ ವಸ್ತುಗಳ ರೂಪದಲ್ಲಿ ನೀಡಿದ ನಿರ್ಮಾಣದ ಸಾಮಗ್ರಿಗಳನ್ನು ಬಳಕೆ ಮಾಡಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುತ್ತಿದೆ.<br>ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 103 ಮುಅಬಿ 2020 ದಿ: 28.05.2025ರಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಸಂಬಂಧಿಸಿದ ಕಾಮಗಾರಿಗಳನ್ನು ಹದಿನೆಂಟು ತಿಂಗಳ ಒಳಗಾಗಿ ಪೂರ್ಣಗೊಳಿಸಲು ಕಾಲಮಿತಿಯನ್ನು ನಿಗದಿಪಡಿಸಲಾಗಿದೆ. |

ಕಂಇ 136 ಮುಸಪ್ರ 2026

**(ರಾಮಲಿಂಗರೆಡ್ಡಿ)**
**ಸಾರಿಗೆ ಮತ್ತು ಧಾರ್ಮಿಕ ದತ್ತಿ ಸಚಿವರು.**